'ಉದ್ಯಮದ ವಾಸ್ತವಕ್ಕನುಗುಣವಾಗಿ' ಕಥಾವಸ್ತುವಿನ ಆಯ್ಕೆಯಲ್ಲಿ ಅವರ ಮಾತಿಗೇ ಮನ್ನಣೆಯಿತ್ತು. ಇದು ಎಲ್ಲಾ ತಾರಾಮೌಲ್ಯದ ಕಲಾವಿದರಿಗೂ ಅನ್ವಯಿಸುತ್ತದೆ. ರಾಜಕುಮಾರ್ ಅವರು ಆಯ್ಕೆ ಮಾಡಿಕೊಂಡ ಕಥಾವಸ್ತುಗಳು ಕುಟುಂಬದ ಮಾನವೀಯ ಸಂಬಂಧ, ಸಾಮಾಜಿಕ ಕಳಕಳಿ, ನೈತಿಕತೆಗಳಿಗೆ ಪೂರಕವಾಗಿದ್ದವು. ರಾಜಕುಮಾರ್ ಅವರ ಕಾಲದಲ್ಲಿದ್ದ ಉದಯಕುಮಾರ್ ಮತ್ತು ಕಲ್ಯಾಣ ಕುಮಾರ್ ಅವರ ಸಿನಿಮಾಗಳು ಒಳ್ಳೆಯ ಕಥಾ ವಸ್ತುವನ್ನು ಹೊಂದಿ ಹೆಸರು ಮಾಡಿದ್ದವು. ಅಂತೆಯೇ ವಿಷ್ಣುವರ್ಧನ್ ಅವರ ಅಭಿನಯದ ಸಿನಿಮಾಗಳು ಸದಭಿರುಚಿಗೆ ಪೂರಕವಾಗಿದ್ದವು. ಶಂಕರನಾಗ್, ಅಂಬರೀಶ್ ಅವರ ಆಯ್ಕೆಗಳೂ ಸದಭಿರುಚಿಗೆ ಹೊರತಾಗಿರಲಿಲ್ಲ. ಹೀಗೆ ಉದಾಹರಿಸುತ್ತ ಹೋಗಬಹುದು. ಮುಖ್ಯವಾಹಿನಿ ಸಿನಿಮಾಗಳ ನಿರ್ದೇಶಕರು ಮತ್ತು ನಿರ್ಮಾಪಕರ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಆದ್ದರಿಂದ ಹೊಸ ಅಲೆ ಅಥವಾ ಕಲಾತ್ಮಕ ಸಿನಿಮಾಗಳ ಹೆಸರಿನಲ್ಲಿ ಮುಖ್ಯವಾಹಿನಿ ಸಿನಿಮಾ ಚರಿತ್ರೆಯನ್ನು ಮರೆಯುವುದು ತಪ್ಪಾಗುತ್ತದೆ. ಅದು ಕಲಾತ್ಮಕತೆಯ ಹೆಸರಿನ ಶ್ರೇಷ್ಠತೆಯ ಸೊಕ್ಕಾಗುತ್ತದೆ. ಮುಖ್ಯವಾಹಿನಿ ಮತ್ತು ಕಲಾತ್ಮಕ ಹೀಗೆ ಯಾವುದೇ ಮಾದರಿಯ ಸಿನಿಮಾಗಳ ತಪ್ಪು-ಒಪ್ಪುಗಳನ್ನು ವಿಮರ್ಶಿಸೋಣ. ಆದರೆ, ಚರಿತ್ರೆಯನ್ನು ಮರೆಯದಿರೋಣ.

ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠತೆಯ ಪರಿಕಲ್ಪನೆಯ ಮೂಲಕ ನಿರ್ಲಕ್ಷ್ಯಕ್ಕೆ ಒಳಗಾದ ಅಭಿವ್ಯಕ್ತಿ ವಲಯಗಳಲ್ಲಿ ಕಾದಂಬರಿಗೆ ಅಗ್ರಸ್ಥಾನ. ಕಾವ್ಯಕ್ಷೇತ್ರಕ್ಕೂ ಈ ಸೋಂಕು ತಗಲಿತ್ತಾದರೂ ಆ ವೇಳೆಗೆ ಕುವೆಂಪು, ಬೇಂದ್ರೆ, ಪು.ತಿ.ನ., ಕೆ.ಎಸ್.ನ. ಮುಂತಾದ ಕವಿಗಳು ಜನಮಾನಸದಲ್ಲಿ ಸ್ಥಾಪಿತರಾಗಿದ್ದರು. ಆದರೆ, 'ಪ್ರಗತಿಶೀಲ ಸಾಹಿತ್ಯ'ದ ಕಾದಂಬರಿಕಾರರು ಮತ್ತು ಮಹಿಳಾ ಬರಹಗಾರರ ವಿಷಯದಲ್ಲಿ ಶ್ರೇಷ್ಠತೆಯ ಮಾನದಂಡವು ಮೇಲುಗೈ ಪಡೆಯಿತು. 'ಜನಪ್ರಿಯ ಸಾಹಿತ್ಯ'ವನ್ನು, ವಿಶೇಷವಾಗಿ ಜನಪ್ರಿಯ ಕತೆ-ಕಾದಂಬರಿಗಳನ್ನು ಕಟು ವಿಮರ್ಶೆಯ ಮೂಲಕ ಕಡೆಗಣಿಸಲಾಯಿತು. ಜನಪ್ರಿಯ ಸಾಹಿತ್ಯದ ನೆರಳಲ್ಲಿ ಬಂದ 'ಅಗ್ಗದ ಸಾಹಿತ್ಯ'ವನ್ನು ನಾವು ಪೋಷಿಸಬೇಕಿಲ್ಲ. ಸಾಹಿತ್ಯ ಸೃಷ್ಟಿಯ ಸಾಮಾನ್ಯ ಗುಣಲಕ್ಷಣಗಳೂ ಇಲ್ಲದ ಕೃತಿಗಳಿಗೆ ಖಂಡಿತ ಮನ್ನಣೆ ಕೊಡಬೇಕಿಲ್ಲ. ನನ್ನ ಅಭಿಪ್ರಾಯದಲ್ಲಿ ಜನಪ್ರಿಯ ಸಾಹಿತ್ಯವೇ ಬೇರೆ; ಅಗ್ಗದ ಸಾಹಿತ್ಯವೇ ಬೇರೆ. ಅಗ್ಗದ ಸಾಹಿತ್ಯವು ಯಾವುದೇ ಕಾಲಘಟ್ಟದಲ್ಲಿ ಬಂದರೂ ನಿರ್ಲಕ್ಷ್ಯಕ್ಕೆ ಯೋಗ್ಯ. ಆದರೆ, ಸದಾಶಯ ಹೊತ್ತು ಬರುವ 'ಜನಪ್ರಿಯ ಸಾಹಿತ್ಯ'ವನ್ನು ನಿರ್ಲಕ್ಷಿಸಬಾರದು. ಅಂತೆಯೇ ಜನಪ್ರಿಯ ಸಂಸ್ಕೃತಿಯನ್ನು ನಿರ್ಲಕ್ಷಿಸಬಾರದು. ಜನಪ್ರಿಯ ಸಂಸ್ಕೃತಿಯ ಮೂಲ ಜನಸಮುದಾಯ. ಹೀಗಾಗಿ ಜನಪ್ರಿಯ ಸಂಸ್ಕೃತಿಯ ಫಲಿತಗಳಾದ ರಂಗಭೂಮಿ, ಸಿನಿಮಾ ಮತ್ತು ಜನಪ್ರಿಯ ಸಾಹಿತ್ಯಗಳು ಸಮುದಾಯದ ಜೊತೆಗೆ ನಿಕಟ ಸಂಬಂಧ ಬೆಳೆಸುತ್ತವೆ. ಕನ್ನಡದ ನವೋದಯ ಸಾಹಿತ್ಯವೂ ಇದಕ್ಕೆ ಪೂರ್ಣ ಹೊರತಾಗಿರಲಿಲ್ಲ. ಕನ್ನಡವನ್ನು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಕಟ್ಟುವ ಜವಾಬ್ದಾರಿಯನ್ನು ನವೋದಯ ಸಾಹಿತ್ಯವು ಗಣನೀಯ ಪ್ರಮಾಣದಲ್ಲಿ ನಿರ್ವಹಿಸಿತು. ಜನಸಮುದಾಯದ ಜೊತೆಗೆ ಸಾಂಸ್ಕೃತಿಕ ಸಂಬಂಧವನ್ನು ಸ್ಥಾಪಿಸಿಕೊಂಡಿತು.

ದೇಶದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಯು ಹುಟ್ಟತೊಡಗಿದಾಗ ಕೈಗಾರಿಕೀಕರಣ ಆರಂಭವಾಗಿತ್ತು. ವ್ಯಕ್ತಿಗತ ಉತ್ಪಾದನಾ ವಿಧಾನದ ಬದಲಾಗಿ ಸಾಮೂಹಿಕ ಉತ್ಪಾದನಾ ವಿಧಾನ ಜಾರಿಯಲ್ಲಿತ್ತು. ಆರ್ಥಿಕತೆ ಮತ್ತು ಉತ್ಪಾದನಾ ವಿಧಾನದಲ್ಲಾದ ಈ ಬದಲಾವಣೆಯು ಸಾಮಾಜಿಕ ಪರಿಣಾಮಗಳ ಜೊತೆಗೆ ಸಾಂಸ್ಕೃತಿಕ ಪರಿಣಾಮಗಳಿಗೂ ಕಾರಣವಾಯಿತು. ಸಾಹಿತ್ಯದಲ್ಲಿ ವ್ಯಕ್ತಿಕೇಂದ್ರಿತ ಅನುಭವ ಪ್ರಾಮಾಣ್ಯದ ಜಾಗಕ್ಕೆ ಜನಸಮುದಾಯದ ಬದುಕು ಬರತೊಡಗಿತು. ಸಾಹಿತ್ಯದ ಅಭಿವ್ಯಕ್ತಿಗೆ ಜನಪ್ರಿಯ ಸ್ವರೂಪ ಲಭ್ಯವಾಯಿತು. ಕನ್ನಡದಲ್ಲೂ ಪ್ರಗತಿಶೀಲ ಸಾಹಿತ್ಯ ಚಳವಳಿಯು ಸ್ವಲ್ಪಕಾಲ ಶಕ್ತಿಶಾಲಿಯಾಗಿತ್ತು. ಚಳವಳಿ ಸ್ಥಗಿತವಾದರೂ ನಿರಂಜನ, ಅ.ನ.ಕೃ, ಬಸವರಾಜ ಕಟ್ಟೀಮನಿ, ತ.ರಾ.ಸು., ಕುಮಾರ ವೆಂಕಣ್ಣ, ಚದುರಂಗ, ಬೀಚಿ ಮುಂತಾದವರ ಸಾಹಿತ್ಯ ಕೃಷಿ ಸಮೃದ್ಧವಾಗಿ ಮುಂದುವರೆಯಿತು; ಅನೇಕ ಜನಪ್ರಿಯ ಸಾಹಿತಿಗಳು ಪ್ರಸಿದ್ಧರಾದರು. ಆದರೆ, ಯಥಾಪ್ರಕಾರ ಶ್ರೇಷ್ಠತೆಯ ಬಾಣಕ್ಕೆ ಜನಪ್ರಿಯ ಸಾಹಿತಿಗಳು ಗುರಿಯಾದರು. ಇದರ ಫಲವಾಗಿ ಅ.ನ.ಕೃ., ನಿರಂಜನ, ಬಸವರಾಜ ಕಟ್ಟೀಮನಿಯವರಂಥ ಲೇಖಕರ